supervision of a doctor, he can come out of it and lead a better quality of life. Good guidance, healthy surroundings and strict monitoring can certainly help to control desires and gradually eliminate the vasanas. Children of many illiterate families living in chronic poverty, do not receive support for education from their parents. However, with the support and encouragement of some well-wishers, many of them not only complete their education but also secure top ranks. Such children change the destiny of their family members as well, because of the kind intervention of noble people in the society.

It is also possible that some dormant vasanas may turn active when we are in the company of certain people. For instance, we often notice advertisements about musical concerts in the city but do not bother to take further interest and forget about them until a close friend invites us for a concert to be performed by his close relative. It is then that we take some interest to know more about it. We attend the concert and develop an interest in learning about the styles. The soothing music lingers in our mind for the next 2-3 days. After some time, when we see an advertisement about another concert, we are tempted to attend that concert and soon start attending more musical events. This is how the vasana about music becomes deep rooted. Then we create a circle of friends and an environment to enjoy more of such events. Thus, we become victims of our own vasanas in the present, which will be further accumulated. When we fail to control the mind, we may end up adding new vasanas.

Hindu philosophy advocates that irrespective of our past, we can choose to be better, nobler and more evolved. With culmination of all desires, human beings attain self-realisation. This is the state of bliss, when in the absence of any vasana, the soul does want to take rebirth. This is the theory of rebirth. Our rebirth is in our hand, depending on the decisions and actions we take at present. If we can curb our negative distractions and indulge in good deeds, then we will have sweet fruits of our actions. If we cannot curb our desires and indulge in nurturing our greed, we will end up in frustration and stress, while deepening the roots of our vasanas. As you sow, so shall you reap. This is known as the Law of Karma.

**Role of Mind and its Control**

Vasana is the source of human desire and desire leads to action. Action is the pivot around which life revolves. Actions not only bring pleasure but also generate anger, ego, arrogance, greed and selfishness, which influence the behaviour and personality. It is through the mind that desires can be curbed. Fortunately, it is only human beings who are gifted with the choice of action. We can choose to act as per our will, even if the vasanas generate thousands of thoughts every day. John Milton, a renowned British poet and an intellectual, described the human mind as "the mind is its own place, and in itself can make a heaven of hell or a hell of heaven". Without a peaceful, stable mind, it is difficult to plan our goals and set priorities. When we lack the ability to plan our life, there is neither any direction nor any peace. Without peace, we cannot live happily.

So the secret of our progress and success lies in controlling our mind. It is said that if a person cannot manage himself, he cannot manage others, not to speak of the world. Mind control is essential for efficient management of the business and study as well. It is the Intellect which has to control the mind and our spiritual scholars have developed many methods to develop our intellect. In the Bhagavad Gita, Lord Krishna tells Arjuna (Chapter 6.35) that it is not easy to control the mind, but there are proven techniques to do so. The first one is through practice (Abhyas) and the second one is through non-attachment (Vairagya). Generally, the mind is always in search of materialistic possessions and pleasure. Therefore, to divert the mind from its old habit of remaining restless to usurp different things, regular and persistent attempts are needed. The practice of restraining the mind can be best carried out by following the path of selfless service (Karma Yoga), the path of devotion (Bhakti Yoga), and the path of knowledge (Jnana Yoga). With these practices, desires can be reduced to a minimum and we will able to withdraw more from materialistic possessions. This withdrawal helps to deepen the practice of these three Yogas and the controlled mind can take us towards Realisation.

The second advice of non-attachment has to be practiced by reminding our mind about all the sufferings due to attachments. Controlling the mind through non-attachment requires suppressing our internal enemies, namely Kama (desire), Krodha (anger), Lobha (greed), Mada (arrogance), Moha (delusion), and Matsarya (jealousy). With gradual reduction of these elements, the mind remains calm and starts thinking logically to suppress most of the desires. Mind control can be done efficiently when we keep calm, without making any haste to act. Regular meditation brings calmness to the mind. Intellect can also be developed through knowledge gained by attending spiritual discourses and studying the scriptures, and application of this knowledge in day-to-day life.

Realising the need to destroy the vasana itself is a big achievement. Any achievement begins with small steps which gather momentum and break records and achieve the impossible. This indeed, can be the beginning of a change in the destiny.

*(Source : Bhavan's Journal)*

*PAGE DONATED BY :* ***SHRI V. G. BHAT, NIGDI***

# ಸೂರಿ ಪರ್ವ

✍ **ವಿದ್ಯಾ ರಾಮಕೃಷ್ಣ, ಪ್ರಥಮ ಎಂ. ಎ. ವಿದ್ಯಾರ್ಥಿ**

ಸೂರಿ ಪರ್ವ (ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಜೀವನ ಸಾಧನೆ) - ಶ್ರೀಮತಿ ಶಶಿಕಲಾ ಹೆಗಡೆಯವರು ರಚಿಸಿದ ಈ ಬಹುಮೂಲ್ಯವಾದ ಕೃತಿ, ಮುಂಬೈ ವಿವಿ ಕನ್ನಡ ವಿಭಾಗಕ್ಕೆ ಅವರು ಸಲ್ಲಿಸಿದ ಎಂ. ಎ. ಶೋಧ ಸಂಪ್ರಬಂಧವಾಗಿದೆ. ಕಳೆದ ವರ್ಷ 2022ರ ಅಕ್ಟೋಬರ್ ತಿಂಗಳಿನಲ್ಲಿ ಲೋಕಾರ್ಪಣೆಗೊಂಡ ಈ ಕೃತಿ ಮುಂಬೈ ವಿವಿ ಕನ್ನಡ ವಿಭಾಗದ 88ನೆಯ ಹೆಮ್ಮೆಯ ಪ್ರಕಟಣೆಯಾಗಿ ಅಭಿಮಾನಿಗಳ, ವಿಮರ್ಶಕರ ಮೆಚ್ಚುಗೆಯನ್ನೂ ಗಳಿಸಿದೆ.

19ನೆಯ ಶತಮಾನದ ಉತ್ತರಾರ್ಧದಲ್ಲಿ ಹೊರನಾಡು ಮುಂಬೈನಲ್ಲಿ ಕನ್ನಡ ವಾಙ್ಮಯಕ್ಕೆ, ಕನ್ನಡ ಪತ್ರಿಕಾ ರಂಗಕ್ಕೆ ಬೆಲೆ ಕಟ್ಟಲಾಗದ ಕಾಣಿಕೆ ನೀಡಿ ಅಲ್ಪಾಯುಷ್ಯರಾಗಿ ಅಸ್ತಂಗತರಾದ ಹಲವು ಪ್ರಥಮಗಳ ಹರಿಕಾರರಾದ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಅವರು ಇಂದು ಹೆಚ್ಚಿನ ಕನ್ನಡಿಗರಿಗೆ ಅಪರಿಚಿತರಾಗಿಯೇ ಉಳಿದಿದ್ದಾರೆ. ಇದಕ್ಕೆ ಒಂದು ಕಾರಣ ತಮ್ಮ ಹರಿತವಾದ ಲೇಖನಿಯ ಮೂಲಕ ವಸಾಹತುಶಾಹಿ ಆಡಳಿತವರ್ಗವನ್ನು ದಿಟ್ಟತನದಿಂದ ವಿರೋಧಿಸಿದ ಶಾಸ್ತ್ರಿ ಸೂರಿಯವರ ಜೀವನ ಸಾಧನೆಯನ್ನೂ, ಅವರ ಕುರಿತ ದಾಖಲೆಗಳನ್ನೂ ಹೇಳ ಹೆಸರಿಲ್ಲದಂತೆ ಮಾಡಿದ ಬ್ರಿಟಿಷರ ಕುತಂತ್ರವೇ ಇರಬಹುದು. ಇಂತಹ ಮಹಾನ್ ಪುರುಷನ ಜೀವನ ಸಾಧನೆಗಳನ್ನು ಅಚ್ಚುಕಟ್ಟಾಗಿ ತಮ್ಮ ಶೋಧನೆಯಲ್ಲಿ ಲಭ್ಯವಾದ ಸಾಕ್ಷ್ಯಾಧಾರಗಳ ಸಮೇತ ಶಶಿಕಲಾ ಅವರು ಈ ಕೃತಿಯಲ್ಲಿ ದಾಖಲಿಸಿದ್ದಾರೆ. 'ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಭಾಗವಾಗಿಯೇ ನಾವು ಈ ಕೃತಿಯನ್ನು ಓದಿಕೊಳ್ಳಬೇಕಾಗಿದೆ' ಎಂದು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯರು ಮುನ್ನುಡಿಯಲ್ಲಿ ಹೇಳಿರುವುದು ಈ ಕೃತಿಯ ಪ್ರಾಮುಖ್ಯವನ್ನು ಸಾರುತ್ತದೆ. ಕನ್ನಡ ಸಾರಸ್ವತ ಲೋಕದ ಆದ್ಯರಾದ, ಅಸಾಮಾನ್ಯ ಸಾಧಕರಾದ ಶಾಸ್ತ್ರಿ ಸೂರಿ ಅವರ ನೆನಪನ್ನು ಇಂದಿನ ಮತ್ತು ಮುಂದಿನ ಪೀಳಿಗೆಯ ಜನರ ನಡುವೆ ಉಳಿಸುವ ಮಹತ್ಕಾರ್ಯ ಮಾಡಿರುವ ಶಶಿಕಲಾ ಅವರು ಅಭಿನಂದನಾರ್ಹರು ಎಂದು ಖ್ಯಾತ ಸಾಹಿತಿ ಮತ್ತು ಪತ್ರಕರ್ತರಾದ ಶ್ರೀ ಎಲ್. ಎಸ್. ಶಾಸ್ತ್ರಿ ಅವರು ಬೆನ್ನುಡಿಯಲ್ಲಿ ಅಭಿಪ್ರಾಯಪಟ್ಟಿರುವುದು ಸೂಕ್ತವಾಗಿದೆ.

'ಮನದ ಮಾತು' ಅಧ್ಯಾಯದಲ್ಲಿ ಶಶಿಕಲಾ ಅವರು ಹೇಳಿಕೊಂಡಂತೆ 2006ರಲ್ಲಿ ಹವ್ಯಕ ವೆಲ್ಫೇರ್ ಟ್ರಸ್ಟ್ ಮುಂಬೈ ಇವರಿಂದ ಸೂರಿ ಸ್ಮರಣಾರ್ಥ ಕೊಡಮಾಡುವ ಪ್ರಥಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡಾಗಿನಿಂದ ಶಾಸ್ತ್ರಿಯವರ ಕುರಿತಾಗಿ ಹೆಚ್ಚಿನ ಮಾಹಿತಿ ತಿಳಿದುಕೊಳ್ಳುವ ಸದಾವಕಾಶ ಅವರಿಗೆ ಒದಗಿತ್ತು. ಇಂತಹ ಮಹಾನ್ ಸಾಧಕನೊಬ್ಬ ಹತ್ತೊಂಬತ್ತನೆಯ ಶತಮಾನದಲ್ಲಿಯೇ ಆಗಿಹೋಗಿದ್ದರಲ್ಲ ಎಂಬ ಹೆಮ್ಮೆ, ಅವರ ಸಾಧನೆ ಬಗೆಗೆ ಇನ್ನಷ್ಟು ತಿಳಿದುಕೊಳ್ಳುವ ಕುತೂಹಲ ಅವರಿಗೆ ಮೂಡಿತ್ತು. ಹೀಗೆ ಹೆಚ್ಚು ಕಡಿಮೆ ಎರಡು ದಶಕಗಳಿಂದ ಅವರಲ್ಲಿ ಹೆಪ್ಪುಗಟ್ಟಿದ್ದ ಅಭಿಮಾನ, ಪ್ರೀತಿಗಳನ್ನು ಈ ಕೃತಿಯ ರೂಪದಲ್ಲಿ ತೋರಿಸಿಕೊಳ್ಳುವ ಅವಕಾಶ ಸಿಕ್ಕಿದಾಗ ಶಶಿಕಲಾ ಅವರು ಈ ಕಾರ್ಯದಲ್ಲಿ ತೋರಿಸಿದ ತನ್ಮಯತೆ, ಶ್ರದ್ಧೆ, ಪ್ರೀತಿ ಕೃತಿಯ ಓದುಗನ ಹೃದಯಕ್ಕೆ ಮುಟ್ಟುತ್ತದೆ. ಅವರ ಬರಹಕ್ಕೆ ಸಾರ್ಥಕ್ಯ ತಂದು ಕೊಡುತ್ತದೆ.




ಈ ಕೃತಿಯಲ್ಲಿ ಬಹಳ ಅರ್ಥಪೂರ್ಣ ಶೀರ್ಷಿಕೆ ಹೊಂದಿರುವ ಆರು ಮುಖ್ಯ ಅಧ್ಯಾಯಗಳಿವೆ. ಮೊದಲಿನ 'ಅಧ್ಯಯನದ ಉದ್ದೇಶ, ವ್ಯಾಪ್ತಿ, ಆಕರಗಳ ಚರ್ಚೆ' ಅಧ್ಯಾಯದಲ್ಲಿ ಶಾಸ್ತ್ರಿ ಸೂರಿ ಅವರನ್ನು, ಅವರ ಸಾಧನೆಗಳನ್ನು ಸಂಕ್ಷಿಪ್ತದಲ್ಲಿ ಪರಿಚಯಿಸಲಾಗಿದೆ. ಸೂರಿ ಅವರ ಕುರಿತು ಈ ಮೊದಲು ನಡೆದಿರುವ ಅಧ್ಯಯನಗಳು, ದಾಖಲಾಗಿರುವ ಮಾಹಿತಿಯನ್ನು ಪ್ರಸ್ತಾಪಿಸಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇಂತಹ ಮಹಾನ್ ಸಾಧಕರ ಸಾಧನೆ ದಾಖಲಾಗದೆ ಅಲಕ್ಷಿತವಾಗಿರುವುದರ ಕುರಿತು ಲೇಖಕಿ ಖೇದ ವ್ಯಕ್ತಪಡಿಸಿದ್ದಾರೆ. ಈ ಪ್ರಮಾದವನ್ನು ತಿದ್ದಿಕೊಳ್ಳುವ ಕಾರ್ಯ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಸರಕಾರ ಮಾಡಬೇಕಾದ ಕರ್ತವ್ಯವಾಗಿದೆ ಎಂದು ಒತ್ತಿ ಹೇಳಿದ್ದಾರೆ.

'ಶಕಪುರುಷ ನಡೆದ ದಾರಿ' ಅಧ್ಯಾಯದಲ್ಲಿ ಶಾಸ್ತ್ರಿ ಸೂರಿ ಅವರ ಜನನ, ಬಾಲ್ಯದ ಕುರಿತು ದೊರೆಯುವ ವಿಷಯಗಳನ್ನು ದಾಖಲಿಸಿದ ಲೇಖಕಿ ಅವರ ವಿದ್ಯಾಭ್ಯಾಸ, ಮುಂದಿನ ಜೀವನ, ಅವರು ಕೈಗೊಂಡ ಪರ್ಯಟನೆ, ಅವರ ನಿಲುವು, ಆಕಾಂಕ್ಷೆ, ಸಾಹಸಗಳನ್ನು ಬಹಳ ಆಪ್ತವಾಗಿ ಪರಿಚಯಿಸುತ್ತ ಅವರ ಸಂಪೂರ್ಣ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದ್ದಾರೆ.

'ಲೇಖನಿಯ ಸಾಧಕ' ಅಧ್ಯಾಯದಲ್ಲಿ ಶಾಸ್ತ್ರಿ ಅವರು ನಡೆಸಿದ ಸಾಹಿತ್ಯ ಕೃಷಿಯ ಕುರಿತ ಸಂಪೂರ್ಣ ಮಾಹಿತಿ ಇದೆ. 1881ಲ್ಲಿ ಅವರು ರಚಿಸಿದ ಕನ್ನಡದ ಪ್ರಥಮ ಪ್ರವಾಸ ಕಥನ 'ದಕ್ಷಿಣ ಯಾತ್ರಾ ಚರಿತ್ರೆ' , 1887ಲ್ಲಿ ರಚಿಸಿದ ಕನ್ನಡದ ಮೊದಲ ಸಾಮಾಜಿಕ ನಾಟಕ 'ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ', ಅವರು ಸಂಸ್ಕೃತದಿಂದ ಅನುವಾದಿಸಿದ 'ಪ್ರಾಚೀನ ನಾಟ್ಯ ಕರ್ಥಾರ್ಣವ' , ಅವರ ಇನ್ನೊಂದು ಕೃತಿ 'ಅನಾರ್ಯರ ವಿವರ' ಈ ಎಲ್ಲಾ ಕೃತಿಗಳ ಪರಿಚಯದ ಜೊತೆಗೆ ಅವುಗಳ ಅವಲೋಕನವನ್ನು ಲೇಖಕಿ ಇಲ್ಲಿ ಸೊಗಸಾಗಿ ಮಾಡಿದ್ದಾರೆ. ಶಾಸ್ತ್ರಿ ಅವರು ನಾಟಕ ರಚನೆಯನ್ನೇ ಏಕೆ ಆಯ್ದುಕೊಂಡಿರಬಹುದು ಎಂಬ ಕುತೂಹಲಕ್ಕೆ ವಿವರಣೆ ಕೊಡುತ್ತಾ, ಶಾಸ್ತ್ರಿ ಅವರ ಸ್ತ್ರೀ ಪರ ಕಾಳಜಿ, ನಾಟಕದಲ್ಲಿ ಸ್ತ್ರೀ ಶೋಷಣೆಯನ್ನು ವಿರೋಧಿಸುವ ಧ್ವನಿ, ನಾಟಕದಲ್ಲಿರುವ ಆಡುಭಾಷೆಯ ಸೊಗಡು, ಅವರು ಹೇಗೆ ತಾವು ಒಡನಾಡಿದ ವ್ಯಕ್ತಿಗಳೊಂದಿಗಿನ ತಮ್ಮ ಅನುಭವವನ್ನು ಸಾಹಿತ್ಯದಲ್ಲಿ ತರುತ್ತಾರೆ, ಅವರ ಸಂಪರ್ಕದಲ್ಲಿದ್ದ ವ್ಯಕ್ತಿಗಳ ಪ್ರಭಾವ ಅವರ ಮೇಲೆ ಹೇಗೆ ಗಾಢವಾಗಿ ಆಗಿದೆ ಎನ್ನುವ ಸೂಕ್ಷ್ಮಗಳನ್ನೆಲ್ಲ ಲೇಖಕಿ ಇಲ್ಲಿ ಸಮಂಜಸವಾಗಿ ತೆರೆದಿಟ್ಟಿದ್ದಾರೆ.

*PAGE DONATED BY :* ***SMT. KALA BHAGWAT,*** **KHARGAR** ***IN MEMORY OF MOTHER LATE SMT. GOURI BHAT***

‘ಗ್ರಂಥ ಸಂಪಾದನೆಯ ಸಾಹಸ’ ಅಧ್ಯಾಯದಲ್ಲಿ ಗ್ರಂಥ ಸಂಪಾದಕನ ಅರ್ಹತೆ, ಪರಿಶ್ರಮಗಳನ್ನು ಕುರಿತು ಮೊದಲು ಹೇಳಿದ ಲೇಖಕಿ ನಂತರ ಶಾಸ್ತ್ರಿ ಸೂರಿಯವರು ಸಂಪಾದಿಸಿ ಪ್ರಕಟಿಸಿದ ಗ್ರಂಥಗಳ ಕುರಿತು ಪೂರ್ಣ ವಿವರಣೆ ನೀಡಿದ್ದಾರೆ. 1886ಲ್ಲಿ ಸ್ತ್ರೀ ಸಾಹಿತ್ಯ ನಿಷೇಧ ಎನ್ನುವಂತಹ ಕಾಲದಲ್ಲಿ ಮಹಿಳಾ ಸಾಹಿತಿಯೊಬ್ಬಳು ರಚಿಸಿದ ‘ಕಿಬ್ಬಚ್ಚಲು ಮಂಜಮ್ಮನ ವೇದಾಂತ ತತ್ವಸಾರ’ ಎಂಬ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ ಸೂರಿ ಅವರ ಸುಧಾರಣಾವಾದಿ, ಸಾಹಸೀ ಪ್ರವೃತ್ತಿಯನ್ನು ಲೇಖಕಿ ತೆರೆದು ತೋರಿಸಿದ್ದಾರೆ. ಕನ್ನಡ ಸಾಹಿತ್ಯದ ಪ್ರಥಮ ಮಹಿಳಾ ಕೃತಿ ಎನ್ನುವ ಹಿರಿಮೆಗೆ ಈ ಕೃತಿ ಪಾತ್ರವಾಗಿದೆ ಎಂಬುದು ಗಮನಾರ್ಹ ಸಂಗತಿ. ಅಂತೆಯೇ ಸೂರಿ ಅವರು ಸಂಪಾದಿಸಿ ಪ್ರಕಟಿಸಿದ ಪರಮದೇವ ಕವಿಯ ತುರಂಗ ಭಾರತ (ಕನ್ನಡದ ಸಮಗ್ರ ಮಹಾಭಾರತದ ಕಾವ್ಯ) ಮತ್ತು ಶಂಕರ ಸಂಹಿತೆಗಳ ವಿವರಣೆ ನೀಡಿದ್ದಾರೆ. ಎರಡೂ ಕೃತಿಗಳ ಕೆಲವು ಪದ್ಯಗಳನ್ನು ಉಲ್ಲೇಖಿಸಿ ಅರ್ಥೈಸಿರುವುದರಿಂದ ಕಾವ್ಯಾಸಕ್ತ ಓದುಗರಿಗೆ ಈ ಕೃತಿಗಳನ್ನೋದುವ ಪ್ರೇರಣೆಯಾಗುವುದರಲ್ಲಿ ಸಂಶಯವಿಲ್ಲ.

‘ಪತ್ರಿಕೋದ್ಯಮದಲ್ಲಿ ದಿಟ್ಟ ಹೆಜ್ಜೆ’ ಅಧ್ಯಾಯದಲ್ಲಿ ಲೇಖಕಿ ಭಾರತದಲ್ಲಿ ಪತ್ರಿಕೋದ್ಯಮ ಬೆಳೆದು ಬಂದ ಬಗೆಯನ್ನು ವಿವರಿಸಿ ನಂತರ ಶಾಸ್ತ್ರಿ ಸೂರಿಯವರು ಪ್ರಾರಂಭಿಸಿದ ಪತ್ರಿಕೆ ‘ಹವ್ಯಕ ಸುಬೋಧ - ಕಾರವಾರ ಚಂದ್ರಿಕೆ’, ಕನ್ನಡದ ಮೊದಲ ಮಕ್ಕಳ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾದ, ಮಕ್ಕಳಿಗಾಗಿ ಅವರು ಆರಂಭಿಸಿದ ‘ಹಿತೋಪದೇಶ’ ಮಾಸ ಪತ್ರಿಕೆಗಳ ಕುರಿತು ವಿವರಣೆ ನೀಡಿದ್ದಾರೆ. ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡು ದಿಟ್ಟತನದಿಂದ ವಸಾಹತುಶಾಹಿಗಳ ವಿರೋಧದ ದನಿಯನ್ನೂ, ಜನ ಜಾಗ್ರತಿ ಮೂಡಿಸುವ ಕಾರ್ಯವನ್ನೂ ಸಮರ್ಪಕವಾಗಿ ಮಾಡಿಕೊಂಡು ಹೋಗಲು ಅವರು ಪಟ್ಟ ಬವಣೆಗಳನ್ನೂ ಚಿತ್ರಿಸಿದ್ದಾರೆ. ಪತ್ರಿಕೆಯಲ್ಲಿ ವ್ಯಂಗ್ಯಚಿತ್ರವನ್ನು ಬರೆದು ಪ್ರಕಟಿಸುವಲ್ಲಿ ಮೊದಲಿಗರಾದ ಶಾಸ್ತ್ರಿಯವರು ಆಡಳಿತದ ದೌರ್ಜನ್ಯವನ್ನು ಎತ್ತಿ ತೋರುವ ತಮ್ಮ ಹರಿತ ಲೇಖನಿಯಿಂದ ಆಡಳಿತ ವರ್ಗದ ಕೋಪಕ್ಕೆ ಗುರಿಯಾಗಿ ಪತ್ರಿಕೆ ನಿಲ್ಲಿಸಿ ಜೈಲಿಗೆ ಹೋಗಬೇಕಾದ ಪ್ರಸಂಗ ಎದುರಾದದ್ದು ಒಂದು ದುರಂತವೇ ಸರಿ. ಶಾಸ್ತ್ರಿಯವರು ಸಂಪಾದಕೀಯದಲ್ಲಿ ಬರೆದ ಅನೇಕ ಉತ್ತಮ ಬರಹಗಳನ್ನು ಸಂಗ್ರಹಿಸಿ ಈ ಅಧ್ಯಾಯದಲ್ಲಿ ನೀಡಿದ್ದಾರೆ.

ಮೇಲಿನ ಅಧ್ಯಾಯಗಳಲ್ಲಿ ಕೆಲವೆಡೆ ಮಾಹಿತಿ ಪುನರಾವರ್ತನೆ ಗೊಂಡಿವೆ. ಅಧ್ಯಾಯಗಳ ಪೂರ್ಣತೆಯ ದೃಷ್ಟಿಯಿಂದ ಇದು ಅನಿವಾರ್ಯವೇ ಆಗಿರಬಹುದು.

‘ಪ್ರಾತಃಸ್ಮರಣೀಯರ ಸ್ಮರಣೆ’ ಅಧ್ಯಾಯದಲ್ಲಿ ಅನೇಕ ವಿದ್ವಾಂಸರು ಶಾಸ್ತ್ರಿಯವರ ಕುರಿತು ಬರೆದ ಲೇಖನಗಳ ಆಯ್ದ ಭಾಗವನ್ನು ನೀಡಿರುವುದಲ್ಲದೆ 'The Footprints of Nobility' ಎನ್ನುವ ಒಂದು ಆಂಗ್ಲ ಲೇಖನವನ್ನೂ ಇಲ್ಲಿ ಸೇರ್ಪಡೆ ಮಾಡಿರುವುದರಿಂದ ಕನ್ನಡ ಓದಲು ಬಾರದ ಹೊಸ ಪೀಳಿಗೆಯ ಕನ್ನಡಿಗರಿಗೂ, ಕನ್ನಡೇತರರಿಗೂ ಶಾಸ್ತ್ರಿಯವರ ಕುರಿತು ತಿಳಿದುಕೊಳ್ಳಲು, ಆಸಕ್ತರಿಗೆ ಅವರ ಕುರಿತು ಹೆಚ್ಚಿನ ಸಂಶೋಧನೆ ಮಾಡಲು ಸಹಾಯಕವಾಗುತ್ತದೆ.

ಹಿರಿಯ ಪತ್ರಿಕೋದ್ಯಮಿ ಶ್ರೀನಿವಾಸ ಜೋಕಟ್ಟೆಯವರು ಶಶಿಕಲಾ ಅವರ ಕಾರ್ಯವನ್ನು ಶ್ಲಾಘಿಸಿ ನುಡಿಸೇಸೆ ಬರೆದಿದ್ದಾರೆ. ಕೃತಿಯ ಮುಂದಿನ ಭಾಗದಲ್ಲಿ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರ ಕುರಿತು ಲಭ್ಯವಿರುವ ಎಲ್ಲಾ ಮಾಹಿತಿಯನ್ನೂ ಸಂಗ್ರಹಿಸಿ ಪ್ರಕಟಿಸಿರುವುದಲ್ಲದೆ, ಹಿತೋಪದೇಶದ ಕೆಲವು ಹಿತವಚನಗಳನ್ನೂ, ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ ನಾಟಕವನ್ನೂ ಪೂರ್ಣವಾಗಿ ಪ್ರಕಟಿಸಿರುವುದು ಆಸಕ್ತರಿಗೆ ಬಹಳ ಅನುಕೂಲವಾಗಿದೆ. ಹಾಗೆಯೇ ಲಭ್ಯವಿರುವ ಸೂರಿ ಅವರ ಏಕೈಕ ಭಾವಚಿತ್ರ ಮತ್ತು ಅವರ ಪತ್ರಿಕೆಗಳ ಕೆಲವು ತುಣುಕುಗಳು ಮತ್ತು ವ್ಯಂಗ್ಯ ಚಿತ್ರವನ್ನು ಪ್ರಕಟಿಸಲಾಗಿದೆ.

ಒಟ್ಟಿನಲ್ಲಿ ಈ ಕೃತಿ, ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯವರ ಕುರಿತು ಲಭ್ಯವಿರುವ ಮಾಹಿತಿಯ ಉತ್ತಮ ಸಂಗ್ರಹದೊಂದಿಗೆ ಅವರ ವ್ಯಕ್ತಿತ್ವ, ಹಿರಿಮೆಗಳನ್ನು ಕನ್ನಡಿಗರಿಗೆ ಪರಿಚಯಿಸುವ ಅನನ್ಯವಾದ ಕೊಡುಗೆಯಾಗಿದೆ. ಶಶಿಕಲಾ ಅವರು ಬಹಳ ಆಪ್ತವಾಗಿ, ಸರಳವಾಗಿ, ಎಲ್ಲಿಯೂ ತಮ್ಮ ಸಾಹಿತ್ಯಿಕ ಪಾಂಡಿತ್ಯದ ಭಾರ ಹೆಚ್ಚಾಗದಂತೆ ಶ್ರದ್ಧೆ ವಹಿಸಿ, ಅಭಿಮಾನ, ಪ್ರೀತಿಗಳಿಂದ ರಚಿಸಿದ ಈ ಕೃತಿ ಮೌಲ್ಯಯುತವೂ, ಸಂಗ್ರಹಯೋಗ್ಯವೂ ಆಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಕೃತಿಯನ್ನು ಓದಿದ ಓದುಗರಿಗೆ ಶಶಿಕಲಾ ಅವರಿಂದ ಇಂತಹ ಇನ್ನೂ ಅನೇಕ ಮೌಲ್ಯಯುತ ಬರಹಗಳ ನಿರೀಕ್ಷೆ ಉಂಟಾಗದೇ ಇರಲಾರದು. ❍

## ಗೀತೆ !!!

**- ಶಾರದಾ ಎ. ಅಂಚನ್, ಕೊಡವೂರು**

ರೋಮಿಯೋ-ಜೂಲಿಯೆಟ್  
ಪ್ರಣಯ ಗೀತೆ ಬರೆಯಲು  
ಇಲ್ಲ ಹುಮ್ಮಸ್ಸು  
ಅನಾಥ ಮಕ್ಕಳು, ಅಬಲೆ ಹೆಣ್ಮಕ್ಕಳ  
ಸುತ್ತ ಸುತ್ತುತ್ತಿದೆ ಮನಸ್ಸು ॥  
ರಾಧಾ -ಕೃಷ್ಣ , ನಲುಮೆ-ಒಲುಮೆ  
ಶೃಂಗಾರ ಕಾವ್ಯದಲ್ಲಿ ವಿಹರಿಸಲು  
ಇಲ್ಲ ಹುರುಪು  
ದೊಂಬರಾಟದ ಎಳೆ ಹುಡುಗಿ  
ಕಣ್ಣೆದುರಿಗೆ ಬಂದು  
ಚಡಪಡಿಸುತ್ತಿದೆ ಮನಸ್ಸು ॥  
ಲೈಲಾ-ಮಜನು ಪ್ರೇಮ-ವಿರಹ  
ಪುಟಗಳ ತೆರೆಯಲು  
ಇಲ್ಲ ಉಮೇದು  
ವಯಸ್ಸಿಗೆ ಮೀರಿ ಹೊರೆ ಹೊರುವ  
ಬಾಲಕನ ಕಂಡು  
ಕರಗುತಿದೆ ಮನಸ್ಸು ॥

★ ★ ★

PAGE DONATED BY : **SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT**

# ರಾಜಕಾರಣಿ : ಅತ್ಯಂತ ನುರಿತ ನಟ

✍ ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ

'ಜಗವೇ ನಾಟಕ ರಂಗ' ಎಂಬ ಹಾಡನ್ನು ನಾವೆಲ್ಲ ಕೇಳುತ್ತ ಬಂದಿದ್ದೇವೆ. ಇಲ್ಲಿ ನಾವೆಲ್ಲ ಪಾತ್ರಧಾರಿಗಳು. ಸಮಯಕ್ಕೆ ಅನುಗುಣವಾಗಿ ನಟಿಸಿ ಉತ್ತಮ ನಟ ಎಂತೆಲ್ಲ ಅನಿಸಿಕೊಳ್ಳುತ್ತೇವೆ. ಈ ನಟನೆ ಕೆಲವರಿಗೆ ದಕ್ಕದೆ ಬದುಕಿನಲ್ಲಿ ಸೋಲನ್ನು ಅನುಭವಿಸುತ್ತಾರೆ. ಅದಕ್ಕೇ ಅನ್ನುವುದು 'acting is not everybody's cup of tea'. ಈ 'ನಟನೆ' ಎಂಬುದಕ್ಕೆ ವಿಶೇಷ ಕೌಶಲ್ಯ ತರಬೇತು ಎಲ್ಲದಕ್ಕೂ ಹೆಚ್ಚಾಗಿ ಆಸಕ್ತಿ ಇರಲೇಬೇಕು. ವೃತ್ತಿಪರ ಸಂಸ್ಥೆಯಲ್ಲಿ ತರಬೇತು ಪಡೆದವನೇ ನಿಜವಾದ ನಟನಾಗಬಲ್ಲ. 'ನಟನೆ' ಅಂದಾಕ್ಷಣ ಅಲ್ಲಿ ಪರಕಾಯ ಪ್ರವೇಶ ಆಗೇ ತೀರುತ್ತದೆ. ಹಾಗಿದ್ದರೆನೇ ಪಾತ್ರಕ್ಕೆ ಜೀವ ತುಂಬಲು ಸಾಧ್ಯ.

ಯಾಕಿಷ್ಟು ವೇದಿಕೆ? ಕಾರಣ ಬಹಳ ಸಹಜ. ಇಂದು ನಮ್ಮ ರಾಜಕಾರಣಿಗಳು, ಪ್ರತಿಷ್ಠಿತ ಸಂಸ್ಥೆಗಳಲ್ಲಿ ತರಬೇತು ಪಡೆದ ನಟರಿಗಿಂತ ಸ್ವಲ್ಪವೂ ಕಡಿಮೆ ಇಲ್ಲದಷ್ಟು ನಟನಾ ಚಾತುರ್ಯ ಹೊಂದಿರುತ್ತಾರೆ. ಹಾಗಂತ ಇವರ್‍ಯಾರೂ ತರಬೇತು ಪಡೆದು ಬಂದವರಾಗಿರುವವರಲ್ಲ. ಇವರೆಲ್ಲ ಒಂದು ರೀತಿ 'ಹುಟ್ಟಾ ನಟರು' ಅಂದರೆ Born Actors ಯಾವ ಕ್ಷಣದಲ್ಲಿ ರಾಜಕೀಯ ಪ್ರವೇಶ ಮಾಡುತ್ತಾರೋ, ಆ ಕ್ಷಣದಿಂದಲೇ ಅವರು 'ನಟ' ಎಂಬ ಸ್ಥಾನ ಅಲಂಕರಿಸಿ ಬಿಡುತ್ತಾರೆ. ಇದೊಂದು ರೀತಿ God Gift ಆವರಿರುವ ಕ್ಷೇತ್ರವೇ, ಅವರನ್ನು ನಟರನ್ನಾಗಿಸಿಬಿಡುತ್ತದೆ. ಇದೊಂದು ರೀತಿ 'on the job training'. ನದಿಗೆ ಧುಮುಕು ಮತ್ತು ಈಜು ಎಂಬಂತೆ. ಯಾವುದೇ ಪದವಿ, ಸರ್ಟಿಫಿಕೇಟ್‌ಗಳ ಅವಶ್ಯಕತೆಯೂ ಇರದು. ಅವಶ್ಯಕತೆ ಇರುವುದು ಅವರು ರಾಜಕೀಯ ಕುಟುಂಬದಿಂದ ಬಂದಿರಬೇಕು ಅಷ್ಟೇ. ಅಲ್ಲಲ್ಲಿ ಕೆಲ ಅಪವಾದಗಳೂ ಇವೆ. ಆದರೆ ಅವುಗಳನ್ನು ಉದಾಹರಣೆ ಅಂತ ಹೇಳಲಾಗದು. ತಂದೆ ರಾಜಕಾರಣದಲ್ಲಿದ್ದರೆ, ಮಗ-ಸೊಸೆ-ಮೊಮ್ಮಗ-ಮಗಳು-ಅಳಿಯ ಅಕ್ಕ-ತಮ್ಮ ಹಾಗೂ ಹತ್ತಿರದ ಸಂಬಂಧಿಗಳು ಸಹಜವಾಗಿಯೇ ರಾಜಕಾರಣಿಗಳಾಗುತ್ತಾರೆ. ಇವರಿಗೆಲ್ಲ ಮನೆಯೇ ತರಬೇತು ಕೇಂದ್ರ.

Politics is also not everybody's cup of tea ! ಈ ರಾಜಕಾರಣಿಗಳ ನಟನೆ ಎಷ್ಟೊಂದು ನೈಜ ಅನಿಸುತ್ತದೆಂದರೆ ಅವರು ಸರ್ವ ಬಲ್ಲವ ಅರ್ಥಾತ್ 'ಸರ್ವಜ್ಞ' ಎಂಬಷ್ಟರ ಮಟ್ಟಿಗೆ ಯಾವುದೇ ವಿಷಯದ ಮೇಲೆ ಅತ್ಯಂತ authentic ಆಗಿ ಮಾತನಾಡುವ ನಿರ್ಧಾರ ತೆಗೆದುಕೊಳ್ಳುವ ಹಂತಕ್ಕೆ ತಲ್ಪಿರುತ್ತಾರೆ. ಇಲ್ಲಿ ಕನಿಷ್ಠ ವಿದ್ಯಾರ್ಹತೆಯ ಹಂಗೂ ಇರುವುದಿಲ್ಲ. ಒಮ್ಮೆ ರಾಜಕಾರಣಿ ಅಂತ ಆದ ಮೇಲೆ ಶೈಕ್ಷಣಿಕ ಅರ್ಹತೆಗಳೆಲ್ಲ ತನ್ನಿಂದ ತಾನೇ ಒದಗಿ ಬಂದು ಬಿಡುತ್ತವೆ. ಒಮ್ಮೆ ಕಾರ್ಪೊರೇಟರೋ, ಶಾಸಕರೋ, ಸಂಸದರೋ, ಸಚಿವರೋ ಆದರೆಂದರೆ ಅವರೆಲ್ಲ 'ನಟನಾ ಚಾತುರ್ಯ' ಎಂಬ ಪದವಿ ಗಿಟ್ಟಿಸಿಕೊಂಡು ಬಿಡುತ್ತಾರೆ. ರಾಜಕೀಯ ರಾಜಕಾರಣ ಅಂದಮೇಲೆ ಅಧಿಕಾರ ಇರಲೇ ಬೇಕಲ್ಲವೇ? ಅತ್ಯಂತ ಶ್ರಮಪಟ್ಟು ಜನರ ಸೇವೆಯನ್ನು ಮಾಡಬೇಕೆಂಬ ಹಂಬಲದಿಂದ IAS, IPS, IFS ಇತ್ಯಾದಿ ಹುದ್ದೆಗೇರಿದವರೂ SSLC ಸಹ ಪೂರ ಮಾಡದ ರಾಜಕಾರಣಿಗಳ ಎದುರು ಕೈಕಟ್ಟಿ ಕುಳಿತು, ರಾಜಕಾರಣಿಗಳ ನಟನೆಯನ್ನು ನೋಡಲೇಬೇಕಾದ, ಅವರ ದರ್ಪ, ಕಟು ಮಾತು, ಮೂದಲಿಕೆಗಳನ್ನೆಲ್ಲ ಅನುಭವಿಸಲೇಬೇಕಾದ ಅನಿವಾರ್ಯತೆಯೂ ಇದೆ. ಯಾರಾದರೂ ಸ್ವಲ್ಪ ಅಪಸ್ವರ ಎತ್ತಿದರೆ Protocol ಹೆಸರಿನಲ್ಲಿ ಏನೆಲ್ಲ ಶಿಕ್ಷೆ ಅನುಭವಿಸಬೇಕಾದೀತು ಎಂಬ ರಹಸ್ಯವೇನಲ್ಲ. ಅಪಸ್ವರ ಎತ್ತಿದವರ ಪರಿಸ್ಥಿತಿ ಏನಾಗಿದೆ ಎಂಬುದೂ ತಿಳಿದಿರುವ ವಿಷಯವೇ. ಇವನ್ನೆಲ್ಲ ಅತ್ಯಂತ ದಕ್ಷತೆಯಿಂದ ನಟಿಸುತ್ತಿರುವ ನಮ್ಮ ರಾಜಕಾರಣಿಗಳನ್ನು ಕಂಡಾಗ ಅವರ ನಟನಾ ಕೌಶಲ್ಯವನ್ನು ಮೆಚ್ಚದೇ ಗತ್ಯಂತರವಿಲ್ಲ.

ನಮ್ಮ ರಾಜಕಾರಣಿಗಳು ಸಮಯ, ಸಂದರ್ಭಗಳಿಗನುಸಾರ ತಮ್ಮ Costume ಬದಲಿಸುವುದನ್ನೂ ಕಂಡಿದ್ದೇವೆ. ಚುನಾವಣೆ ಬಂತೆಂದರೆ, ಹಿಂದುವಾಗಿಯೂ, ಮುಸ್ಲಿಂ ಆಗಿಯೂ, ಸಿಖ್ಖರಾಗಿಯೂ, ಪಾರ್ಸಿಗಳಾಗಿಯೂ, ದಲಿತರಾಗಿಯೂ, ರೈತರಾಗಿಯೂ, ಹಣ್ಣು ವ್ಯಾಪಾರಿಯಾಗಿಯೂ ಬೀದಿಯ ಬದಿಯ ವ್ಯಾಪಾರಿಯಾಗಿಯೂ, ಸಂತರಾಗಿಯೂ, ಪೂಜಾರಿಗಳಾಗಿಯೂ ವೇಷ ಧರಿಸಿ, ಅಚ್ಚುಕಟ್ಟಾಗಿ ನಟಿಸುತ್ತಾರೆ. ರೈತರ ಜತೆ ನಾಟಿ ಮಾಡುತ್ತಾರೆ. ಬೀದಿಯಲ್ಲಿ ಕಸ ಗುಡಿಸುತ್ತಾರೆ. ದಲಿತರ ಮನೆಯಲ್ಲಿ ಅಥವಾ ಇನ್ನಾವುದೋ ಜನಾಂಗದವರ ಮನೆಯಲ್ಲಿ ಏನಾದರೂ ಅವಘಡ ನಡೆದರೆ ಸಾಂತ್ವನ ಹೇಳುತ್ತಾ ಅವರೊಟ್ಟಿಗೆ ತಿಂಡಿ ಊಟ ಮಾಡಿ ತಾವೂ ನಿಮ್ಮಂತೆ ಅಂತ ಪೋಸ್ ಕೊಟ್ಟು, ದಲಿತರ ಉದ್ಧಾರಕ ಎಂಬ ನಟನಾ ಸರ್ಟಿಫಿಕೇಟ್ ಸಹ ಪಡೆಯುತ್ತಾರೆ. ಮನೆಯಲ್ಲಿ ಒಂದು ಬಾರಿಯೂ ಕಸಬರಿಗೆ ಹಿಡಿಯದವರು ತಮ್ಮ ಕೋಣೆಯನ್ನು ತಾವೇ ಸ್ವಚ್ಛಗೊಳಿಸುತ್ತಿರುವ ದೃಶ್ಯಗಳನ್ನು ಕಂಡಿದ್ದೇವೆ. ನಾವು ಸಿನೇಮಾ ನಾಟಕಗಳಲ್ಲೂ ಕಲಾವಿದರನ್ನು ಕಾಣುತ್ತೇವೆ. ಆದರೆ ಅವರಲ್ಲಿ ಹೆಚ್ಚಿನವರು ಕೆಲವಷ್ಟೇ ಪಾತ್ರ ಮಾಡಲು ಶಕ್ಯರಿರುತ್ತಾರೆ. ಅದೇ ನಮ್ಮ ರಾಜಕಾರಣಿಗಳು ಯಾವ ಪಾತ್ರವನ್ನಾದರೂ ಮಾಡಲು ರೆಡಿ. ಇದೇ ಅಲ್ಲವೇ ನಟನೆ. ನಿಜ ಅರ್ಥದಲ್ಲಿ ಅವರೊಬ್ಬ ಅವತಾರ ಪುರುಷರು.

ರಾಜಕಾರಣಿಗಳು ಒಬ್ಬರ ಮೇಲೆ ಇನ್ನೊಬ್ಬರು ಮುಗಿ ಬೀಳುವುದು, ಕಾಲೆಳೆಯುವುದು, ಬೈದಾಡಿಕೊಳ್ಳುವುದು, ಕೆಟ್ಟ-ಕೆಟ್ಟ ಪದಗಳನ್ನು ಬಳಸಿ ಹೀಯಾಳಿಸುವುದು, ಕಿರುಚಾಡುವುದು, ಭ್ರಷ್ಟ, ನೀಚ, ನರಹಂತಕ, ದ್ರೋಹಿ ಎಂತೆಲ್ಲ ಹೇಳಿಕೊಂಡರೂ, ರಾಜಕೀಯದಲ್ಲಿ ಯಾರೂ ಸದಾ ಮಿತ್ರರೂ ಅಲ್ಲ; ಶತ್ರುವೂ ಅಲ್ಲ ಎನ್ನುತ್ತಾ ಒಬ್ಬರನ್ನೊಬ್ಬರು ಅಪ್ಪಿಕೊಳ್ಳುವ, ಒಪ್ಪಿಕೊಳ್ಳುವ, ಒತ್ತಟ್ಟಿಗೆ ಊಟ-ತಿಂಡಿ ಮಾಡುವ ದೃಶ್ಯವನ್ನೂ ದಿನನಿತ್ಯ ಕಾಣುತ್ತೇವೆ. ಇವಕ್ಕೆಲ್ಲ ಒಂದೇ ಪದದ ವ್ಯಾಖ್ಯಾನವೆಂದರೆ 'ನಟನೆ' ಈಗಿತ್ತಲಾಗಿ ಸೇರ್ಪಡೆಗೊಂಡುದರಲ್ಲಿ 'ಹಳ್ಳಿ ವಾಸ್ತವ್ಯ', 'ರಾಜಕಾರಣಿಗಳ ನಡೆ, ಹಳ್ಳಿ ಕಡೆ' ಇತ್ಯಾದಿ ಕೇವಲ ಒಂದೋ, ಎರಡೋ ರಾತ್ರಿ ಹಳ್ಳಿಯ ಯಾವುದೋ ಬಡವರ ಮನೆಯಲ್ಲಿ ವಾಸಿಸುವಾಗೆಲ್ಲಾ ತಮಗೆ ಬೇಕಾದ ವ್ಯವಸ್ಥೆಗಳನ್ನೆಲ್ಲ ಸಿದ್ಧವಾಗಿರಿಸಿ, ತಿರುಗಿ ಬರುವಾಗ ಅವೆಲ್ಲವುಗಳನ್ನು ವಾಪಸ್ ಪಡೆದು ವಾಸಿಸುತ್ತಿದ್ದ ಮನೆ ಮೊದಲಿನಂತೇ ಉಳಿದಿರುವ ಪ್ರಸಂಗಗಳೂ ನಡೆದಿವೆ. ಇದೂ ನಟನೆಯ ಭಾಗವೇ.

ಇಲ್ಲಿ ನಮ್ಮೆಲ್ಲರನ್ನು ಕಾಡುತ್ತಿರುವ ಸಂಗತಿಯೆಂದರೆ ಈ ರಾಜಕಾರಣಿಗಳಿಗೆ ನಟನೆ ಅನಿವಾರ್ಯವೇ? ಖಂಡಿತಾ ಹೌದು. ಇದು ಪ್ರಜಾಪ್ರಭುತ್ವ. ಅಧಿಕಾರಕ್ಕೆ ಬರಬೇಕೆಂದರೆ ಹೆಚ್ಚು ಮತ ಬೀಳಲೇ ಬೇಕು. ಇದನ್ನು ಪಡೆಯಲು ಹೆಚ್ಚು ಹೆಚ್ಚು ಜನರನ್ನು ಓಲೈಸಲೇಬೇಕು. ರಾಜಕೀಯ ಅಧಿಕಾರವಲ್ಲವೆಂದರೆ ಅರ್ಥಹೀನ. ನಿಜವಾಗಿ ಜನ ಸೇವೆಗೆಂದು ರಾಜಕೀಯ ಪ್ರವೇಶಿಸುವವರು ಇದ್ದಾರೆಯೇ? ಇಲ್ಲಿ 'ಜನಸೇವೆ' ನೆಪಕ್ಕೆ ಮಾತ್ರ. ಜನಸೇವೆಯ ಹೆಸರಿನಲ್ಲಿ ಸ್ವಂತ ಸೇವೆ ಮಾಡಿಕೊಳ್ಳುವುದೇ ಎಲ್ಲೆಡೆ ಕಂಡು ಬರುತ್ತಿರುವ ದೃಶ್ಯ. ನಾವೇ ಆರಿಸಿ ಕಳುಹಿಸಿದವರ ಭಿನ್ನ-ಭಿನ್ನ ನಟನೆಗಳನ್ನು ನೋಡುತ್ತ ಮೂಕ ಪ್ರೇಕ್ಷಕರಾಗುಳಿದಿರುವುದೇ ನಮ್ಮ ದೌರ್ಭಾಗ್ಯ?! ❍

# ಭಗವತ್ಪ್ರೇಮ

✍ ಚಂದ್ರಶೇಖರ ಉಪಾಧ್ಯಾಯ, ಧಾರೇಶ್ವರ

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥
(ಗೀತಾ 4-7)

ಎಂದು ಭಗವದ್ಗೀತೆಯಲ್ಲಿ ಭಗವಂತ ಅಪ್ಪಣೆ ಕೊಡಿಸಿದಂತೆ ದಶಾವತಾರಿಯಾದ ಮಹಾವಿಷ್ಣು ಕಾಲಕಾಲಕ್ಕೆ ಧರ್ಮ ಸಂಸ್ಥಾಪನೆಯನ್ನು ಮಾಡಿದ್ದಾನೆ. ಅವನ ಎಲ್ಲ ಅವತಾರದಲ್ಲಿ ಅಷ್ಟಮ ಅವತಾರವನ್ನು ಸಂಪೂರ್ಣ ಅವತಾರ ಎಂದು ಭಾವಿಕರು ಭಾವಿಸುತ್ತಾರೆ. ಈ ಅವತಾರದಲ್ಲಿ ಆತ ತನ್ನ ಎಲ್ಲಾ ಭಕ್ತರಿಗೂ ಪ್ರೇಮದ ಎಲ್ಲ ಸಾಧ್ಯತೆಯನ್ನು ಹೃದ್ಗೋಚರಿಸಿದ್ದಾನೆ.

ಹೌದು. ಪ್ರೇಮ ಎಂದರೆ ಸಾಮಾನ್ಯವಾಗಿ ಭಾವಿಸುವಂತೆ ಗಂಡು ಹೆಣ್ಣಿನ ಭಾವ ವಿನಿಮಯ ಒಂದೇ ಅಲ್ಲ. ಅಬಾಲ ವೃದ್ಧರೂ ಪ್ರೇಮಿಗಳಾಗ ಬಹುದು ಎಂಬುದನ್ನು ತನ್ನ ಪೂರ್ಣಾವತಾರದಲ್ಲಿ ಶ್ರೀ ಕೃಷ್ಣ ತೋರಿಸಿದ್ದಾನೆ.

ಈ ಪ್ರೇಮ ಎಂಬುದನ್ನ ಚಿಕ್ಕ ಮಕ್ಕಳ ಮೇಲೆ ತೋರಿಸಿದಾಗ ಅದು ವಾತ್ಸಲ್ಯ ಎನಿಸಿಕೊಂಡರೆ, ಸಮ ವಯಸ್ಕರಲ್ಲಿ ಹರಿಸಿದಾಗ ಸ್ನೇಹ ಎಂದು ಕರೆಸಿಕೊಳ್ಳುತ್ತದೆ. ಹಿರಿಯರಲ್ಲಿ ಪ್ರೀತಿ ತೋರಿಸಿದಾಗ ಅದು ಗೌರವ ಎಂದಾದರೆ ಅಸಹಾಯಕರಲ್ಲಿ ಅನಿಸಿದಾಗ ಅದು ಕರುಣೆ ಎನಿಸಿಕೊಳ್ಳುತ್ತದೆ.

ಅದೇ ಪ್ರೇಮವನ್ನು ಭಗವಂತನೆಡೆಗೆ ಹರಿಸಿದಾಗ ಅದು ಭಕ್ತಿ ಯಾಗುತ್ತದೆ.

ಸ್ಥಾಯಿ ಭಾವವಾದ ಪ್ರೀತಿ ಬೇರೆ ಬೇರೆ ವ್ಯಕ್ತಿಯಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಸಿಕೊಳ್ಳುತ್ತದೆ.

ಶ್ರೀ ಕೃಷ್ಣ ನನ್ನ ಜೀವನದಲ್ಲಿ ಈ ಎಲ್ಲ ಪ್ರೀತಿಗಳನ್ನು ಯತೇಚ್ಛ ಅನುಭವಿಸಿ ತನ್ನನ್ನು ಪ್ರೀತಿಸಿದವರಿಗೆ ಆಯಾ ಭಾವದಲ್ಲಿ ಸ್ಪಂದಿಸಿದ್ದಾರೆ "ಯದ್ಭಾವಂ ತದ್ಭವತಿ" ಎಂಬಂತೆ. ತಾನು ವಾಸುದೇವ ಸುತನಾದರೂ, ದೇವಕಿಯ ಕಂದನಾದರೂ, ನಂದಗೋಪ ಯಶೋದೆಯರಿಗೆ ಮಗನಾಗಿ ತಾನು ಮಾತೃ ವಾತ್ಸಲ್ಯದ ಪ್ರೇಮ ಉಣ್ಣುತ್ತಾ ಅವರಿಗೆ ಪುತ್ರವಾತ್ಸಲ್ಯದ ಸವಿ ನೀಡಿದ ಬಾಲಕೃಷ್ಣ ತನ್ನ ತುಂಟಾಟ ಬಾಲ ಚೇಷ್ಟಗಳಿಂದ ಅವರನ್ನು ಸಂಪ್ರೀತರನ್ನಾಗಿಸಿದ. ಪುತ್ರ ವಾತ್ಸಲ್ಯದಿಂದ ಯಶೋದಳ ಕಣ್ಣು ಕುರುಡಾದಾಗ ಮಣ್ಣು ತಿಂದ ಬಾಯಲ್ಲಿ ಬ್ರಹ್ಮಾಂಡವನ್ನು ತೋರಿಸಿ ತಾನು ನಿನ್ನ ಮಗನೊಂದೇ ಅಲ್ಲ ಭಗವಂತನೂ ಹೌದು ಎಂದು ತಿಳಿಸಿದ.

ಗೋಕುಲದಲ್ಲಿ ತನ್ನ ಸಮವಯಸ್ಕರ ಗುಂಪನ್ನ ಕಟ್ಟಿ ಬೆಣ್ಣೆ ಕದ್ದು ಸ್ನೇಹಿತರಿಗೆ ತಿನಿಸಿದ. ರಾಜಕುಮಾರನಾದ ಅವನಿಗೆ ಬೆಣ್ಣೆಯ ಕೊರತೆಯೇ? ಮಿತ್ರರಿಗಾಗಿ ಕದ್ದು ತಾನೇ ಬೆಣ್ಣೆಕಳ್ಳ ನವನೀತ ಚೋರ ಎನಿಸಿಕೊಂಡ.

ಗೊಲ್ಲರೊಡನೆ ತಾನೂ ಒಂದಾಗಿ ಗೋಪಾಲನಾಗಿ ಗೋವುಗಳಲ್ಲೂ ದೇವನಿರುವ ಎಂದು ಪಶು ಪ್ರೇಮವನ್ನ ತೋರಿಸಿದ. ಇಂದ್ರನ ಕೋಪದಿಂದ ಅತಿವೃಷ್ಟಿಯಾಗಿ ಗೋಕುಲವಾಸಿಗಳೆಲ್ಲ ಹೆದರಿದಾಗ, ಭಯಭೀತರಾದಾಗ ಗಿರಿಧಾರಿಯಾಗಿ ಗೋವರ್ಧನ ಗಿರಿಯ ಅಡಿಯಲ್ಲಿ ತನ್ನೆಲ್ಲ ಜನರಿಗೆ ಆಶ್ರಯ ನೀಡಿದಾತ ಗೋಪಾಲಕೃಷ್ಣ.



ತನ್ನ ಸಹಪಾಠಿಯಾದ ಕುಚೇಲನಿಗೆ ಅವನ ಆತ್ಮ ಗೌರವಕ್ಕೆ ಚ್ಯುತಿ ಬರದ ರೀತಿಯಲ್ಲಿ ಗೌರವಿಸಿ ಕೃಷ್ಣ ಕುಚೇಲರ ಪ್ರೀತಿ ಜನಕ್ಕೆ ಆದರ್ಶವಾಗುವಂತೆ ಮಾಡಿದ ಅಚ್ಯುತನೀತ.

ಶ್ರೀ ಕೃಷ್ಣನ ಸ್ನೇಹ ರಸ ಉಂಡವರಲ್ಲಿ ಪ್ರೇಮ ಛತ್ರದ ಅಡಿಯಲ್ಲಿ ನಡೆದವರಲ್ಲಿ ಪಾರ್ಥನಷ್ಟು ಭಾಗ್ಯವಂತರು ಇನ್ನೊಬ್ಬರಿಲ್ಲ ದೇವನನ್ನೇ ಬಾವನನ್ನಾಗಿ ಪಡೆದ ಸಂಭಾವಿತನೀತ. ವಿಭೂತಿ ಯೋಗದಲ್ಲಿ

ವೃಷ್ಣೀನಾಂ ವಾಸುದೇವೋಸ್ಮಿ ಪಾಂಡವಾನಾಂ ಧನಂಜಯ:
(ಗೀತಾ. 10-37)

ಎಂದು ಅನ್ನುವಷ್ಟು ಪ್ರೀತಿಪಾತ್ರನಾದವನು ಅರ್ಜುನ.

ಇಡೀ ಮಹಾಭಾರತದಲ್ಲಿ ನಮಗೆ ಎದ್ದು ತೋರುವುದು ಶ್ರೀ ಕೃಷ್ಣಾರ್ಜುನರ ಗೆಳೆತನ, ಸಖ್ಯ ಭಾವ. ಹೆಜ್ಜೆ ಹೆಜ್ಜೆಗೂ ದಾರಿ ತೋರಿಸುತ್ತಾ ವ್ಯೂಹಕ್ಕೆ ಪ್ರತಿವ್ಯೂಹ ರಚಿಸುತ್ತ ಮುಂದೆ ಮಹಾಯುದ್ಧಕ್ಕೆ ಬೇಕಾದ ಅಸ್ತ್ರ ಶಸ್ತ್ರ ಸಂಗ್ರಹ ಮಾಡುತ್ತಾ ಶೂನ್ಯನಾಗಿದ್ದ ಧನಂಜಯನನ್ನ ಮಾನ್ಯನನ್ನಾಗಿ ಮಾಡಿದ್ದೇ ಶ್ರೀ ಕೃಷ್ಣ. ಇಷ್ಟೆಲ್ಲ ತಯಾರಿ ನಡೆಸಿದರೂ ಕುರುಕ್ಷೇತ್ರದಲ್ಲಿ ನನ್ನವರನ್ನು ನಾನು ಕೊಲ್ಲಲಾರೆ, ಗುರು ಹಿರಿಯರನ್ನು, ಸಂಬಂಧಿಗಳನ್ನು, ಸಹಪಾಠಿಗಳನ್ನು ಕೊಂದು ಪಡೆಯುವ ರಾಜ್ಯ ನಮಗೆ ಬೇಡ ಎಂದು ಅರ್ಜುನ ಕೈ ಚೆಲ್ಲಿ ಕುಳಿತಾಗ

ಕ್ಲೈಬ್ಯಂ ಮಾ ಸ್ಮ ಗಮ: ಪಾರ್ಥ ನೈತತ್ ತ್ವಯ್ಯುಪಪದ್ಯತೇ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ:॥
(ಗೀತಾ 2-37)

ಎಂದು ಹುರಿದುಂಬಿಸಿ,

ಹತೋವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಂ।
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯ:॥
(ಗೀತಾ 2-37)

ಎಂದು ನಿಶ್ಚಯ ವಾಕ್ಯ ಹೇಳುತ್ತಾ,

ಯತ್ರ ಯೋಗೇಶ್ವರ: ಕೃಷ್ಣ: ಯತ್ರ ಪಾರ್ಥೋ ಧನುರ್ಧರ:।
ತತ್ರ ಶ್ರೀರ್ವಿಜಯ ಭೂತಿ: ಧ್ರುವಾನೀತಿ ಮರ್ತಿರ್ಮಮ:॥
(ಗೀತಾ 18-78)

ಎಂದು ವಿಜಯದ ಮುನ್ಸೂಚನೆಯನ್ನು ಕೊಟ್ಟಂತಹ ಶ್ರೀ ಕೃಷ್ಣನ ಸಖ್ಯ ಪ್ರೇಮ ಎಲ್ಲರಿಗೂ ಲಭ್ಯವಿಲ್ಲ; ಪಡೆದಂತ ಅರ್ಜುನನೇ ಧನ್ಯ.

ಯಮುನಾ ತಟದ ಬೃಂದಾವನದಲ್ಲಿ ಕೃಷ್ಣ ನಡೆಸಿದ ರಾಸಲೀಲೆ ಹಲವಾರು ಕವಿಗಳಿಗೆ, ಕಲಾವಿದರಿಗೆ, ಶಿಲ್ಪಿಗಳಿಗೆ ಸ್ಫೂರ್ತಿಯಾಗಿದೆ. ಜಯದೇವನ 'ಗೀತ ಗೋವಿಂದ' ವಂತೂ ಎಲ್ಲರ ನಾಲಿಗೆಯ ತುದಿಯಲ್ಲಿ ನಿಂತಿದೆ. ಭಕ್ತಿ ಸಾಹಿತ್ಯದ ಅರ್ಧ ಭಾಗ ಶ್ರೀ ಕೃಷ್ಣನ ಬಗ್ಗೆ ಇದೆ ಎಂದರೆ ತಪ್ಪಾಗಲಿಕ್ಕಿಲ್ಲ.

*PAGE DONATED BY :* ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

ರಾಧಾ, ಮೀರಾಳಂತ ಭಕ್ತರು ತಮ್ಮ ಜೀವನವನ್ನೇ ಕೃಷ್ಣ ಪ್ರೇಮಕ್ಕಾಗಿ ಮುಡುಪಾಗಿಟ್ಟಿದ್ದಾರೆ. ಉತ್ತರ ಭಾರತದ ಕಡೆಗಂತೂ ಶ್ರೀ ಕೃಷ್ಣನು ರಾಧಾಶ್ಯಾಮ ಎಂತಲೇ ಪ್ರಸಿದ್ಧ.

ಹಿರಿಯರಿಗೆ ಗೌರವ ಕೊಡುವುದನ್ನು ಕೃಷ್ಣನಿಂದ ಕಲಿಯಬೇಕು. ದುಷ್ಟ ಕಂಸನನ್ನು ಕೊಂದಾಗ ಸೆರೆಯಲ್ಲಿದ್ದ ಅವನ ತಂದೆ ಉಗ್ರಸೇನ ರಾಜನಿಗೆ ಪಟ್ಟಾಭಿಷೇಕ ಮಾಡಿದ. ತಾನೇ ರಾಜನಾಗಬಹುದಿತ್ತು ಆದರೆ ತನ್ನಜ್ಜನನ್ನೇ ಮಹಾರಾಜನನ್ನಾಗಿ ಕೂಡ್ರಿಸಿದ.

ತನ್ನ ಗುರು ಸಾಂದೀಪನಿಯವರು ಗುರುದಕ್ಷಿಣೆಗಾಗಿ ಕಳೆದು ಹೋದ ತನ್ನ ಮಗನನ್ನ ಹುಡುಕಿಕೊಡು ಎಂದಾಗ ಮರಣ ಪಟ್ಟ ಮಗನನ್ನೇ ಬದುಕಿಸಿಕೊಟ್ಟು ಗುರುದಕ್ಷಿಣೆಯನ್ನು ಸಮರ್ಪಿಸುತ್ತಾನೆ.

ಕೃಷ್ಣನಿಗೆ ಅವನ ಭಕ್ತರು ದಯಾಸಿಂಧು, ಕರುಣಾ ಸಾಗರ ಎಂದು ಮುಂತಾಗಿ ಕರೆಯುತ್ತಾರೆ. ಆರ್ತಳಾಗಿ ಕರೆದ ದ್ರೌಪದಿಗೆ ಅಕ್ಷಯಾಂಬರವನ್ನೇ ಇತ್ತನು. ವೈರಿ ಪಕ್ಷದಲ್ಲಿದ್ದರೂ ಆಚಾರ್ಯ ಭೀಷ್ಮರಿಗೆ ವಿಶ್ವರೂಪ ತೋರಿಸಿದ ತಾನು ಚಕ್ರ ಹಿಡಿಯುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರೂ ಶ್ರೀ ಕೃಷ್ಣನ ಕೈಯಲ್ಲಿ ಚಕ್ರಹಿಡಿಸುತ್ತೇನೆಂದು ಭೀಷ್ಮ ಪ್ರತಿಜ್ಞೆ ಮಾಡಿದಾಗ ತನ್ನ ಮಾತು ಸುಳ್ಳಾದರೂ ಪರವಾಗಿಲ್ಲ, ಭಕ್ತರ ಮಾತನ್ನು ಸುಳ್ಳು ಮಾಡಬಾರದು ಎಂದು ಕುರುಕ್ಷೇತ್ರದಲ್ಲಿ ಚಕ್ರ ಹಿಡಿದ ಕರುಣಾ ಸಿಂಧು.

ಹಲ್ಲು ಹುಟ್ಟದ ಮಗುವಿನಿಂದ ಹಿಡಿದು ಹಲ್ಲು ಉದುರಿದ ವಯೋ ವೃದ್ಧರ ತನಕವೂ ಯಾವುದೇ ಲಿಂಗ ಬೇಧವಿಲ್ಲದೆ ಕೃಷ್ಣ ನನ್ನವನು ಎಂಬ ಭಾವನೆಯಲ್ಲಿದ್ದ ಭಕ್ತ ಹೃದಯ ನಿವಾಸಿಯಾದ ಶ್ರೀ ಕೃಷ್ಣ ಬಾಲಕೃಷ್ಣನು ಹೌದು ರಾಧಾಕೃಷ್ಣನು ಹೌದು ಯೋಗಾಚಾರ್ಯನೂ ಹೌದು.

ಭಕ್ತಿಗೆ ವಿಶೇಷವಾದ ಶಕ್ತಿಯಿರುವುದು.

ಇದೇ ಭಕ್ತಿಯನ್ನು ಅನ್ನಕ್ಕೆ ಸೇರಿಸಿದರೆ ಅದು ಪ್ರಸಾದವಾಗುತ್ತದೆ. ನೀರಿಗೆ ಸೇರಿಸಿದರೆ ತೀರ್ಥವಾಗುತ್ತದೆ.

ದೀಪಕ್ಕೆ ಸೇರಿಸಿದರೆ ಆರತಿಯ ಆಗುತ್ತದೆ. ಹಸಿವಿಗೆ ಸೇರಿಸಿದರೆ ಉಪವಾಸ ಆಗುತ್ತದೆ.

ಭಕ್ತರ ಕಾಮಧೇನುವಾದ ಭಗವಂತ ನಮ್ಮನ್ನ ರಕ್ಷಿಸಲಿ.

# ಸಂಕ್ಷಿಪ್ತ ಸುದ್ದಿಗಳು

## Obituary

**Shri Bhalachandra N. Bhagwat** was born as the youngest child of Radha and Narayan Bhagwat (originally from Karki) on Dec 21, 1936 in Pune, Maharashtra. He passed away peacefully on 9th April, 2023 at his residence in Worli, Mumbai.

Shri B. N. Bhagwat studied in Modern High School, Pune and then attended Fergusson College for his B.A. degree in Economics. He was always at the top of his class and excelled in academics. Post his B.A., he went on to do his M.A. Due to his brilliance in academics, an enquiring mind and an ability to connect with all, he successfully cleared the daunting IAS examinations in 1961. After formal training, he joined the Maharashtra cadre. His first posting was in Satara in 1964.

Shri B. N. Bhagwat had a stellar career as an IAS officer with several key assignments such as MD SIICOM, CEO MIDC and Industry Commissioner. In these roles, He played a pivotal role in the development of Maharashtra. He also held a number of key posts in New Delhi with the Dept of Electronics and Department of Telecommunications. His 10-year stint in New Delhi culminated in his seniormost role as Secretary of Sports and Youth Affairs to Government of India. Being a sports enthusiast, this was an apt role for him to impact the development of sports across India. In retirement, he continued to be actively involved in several philanthropic activities such as CRY Foundation, Sankalp Foundation and rehabilitation of tribal workers.

Along his journey, Shri B. N. Bhagwat picked up a tennis racquet in his early 30's. Tennis became a big passion of his and he played it actively till his late 70's. The tennis fraternity at Cricket Club of India (CCI) respected him dearly as a father figure. He had a brilliant mind and was very knowledgeable in economics, politics, religion, sports and world affairs. He constantly kept learning and was an avid reader. He had a great sense of humor and could rattle off

## HAVYAKA WELFARE TRUST BANK A/C DETAILS

Due to the merger of Corporation Bank with the Union Bank of India we request the members to note the change in the bank details

**Union Bank of India, Santacruz (E), Mumbai Branch, Mumbai 400 029**

1) **Havyaka Welfare Trust**
   **S.B. A/c No. 520101249405926**
   **IFS Code : UBINO904996**

2) **Havyaka Welfare Trust Women Welfare Cell**
   **S.B. A/c No. 520101249405962**
   **IFS CODE : UBINO904996**

**Donations to Havyaka welfare Trust' qualify for tax deduction under section 80 (G).**

*PAGE DONATED BY : **SHRI A. K. BHAT, CHITRIGI & FAMILY***



an endless list of jokes. He was a great source of strength to his family and friends.

He donated liberally to Havyaka Welfare Trust to give educational aid to the needy and deserving students. He also contributed many articles to Havyaka Sandesha.

He is survived by his wife Meena, sons Anand and Aniruddha and daughter Aparna and four grandchildren.

***We pray for the eternal peace of the departed soul.***

## Achievement



**Shri Gopal Krishna Hegde,** originally from Holanagadde, Kumta practising in law at Mumbai over 35 years, was designated as a Senior Counsel by Bombay High Court on 16 th February, 2023. He started his practice with his late father and there after he is on his own.

He has represented MSRTC, MIDC & various other companies, besides taxi and rickshaw unions before the High Court.

He is counsel for CIDCO and appears in their matters related to Navi Mumbai Airport, Dams, Metro projects etc.

He also handles constitutional and other civil matters.

***We congratulate him.***

## Unlock The Power of Your Money
## Book by Vinod Bhat




'The Financial Independence Marathon' the book written by Vinod N. Bhat is published by Penguin India. The book beautifully explains how to unlock the power of one's money. In a story telling format the critical concepts of investment are made clear. In a simple tone the author explains 'Happiness is the goal: Money is a tool to be happy' and by the proper allocation of money one can secure his future. As it is said time is money, money also gives us time to think properly and take appropriate decisions. It creates an environment where a person can follow his passion and live on his own terms. By explaining various aspects of financial planning, the author guides a common man as to how to become financially independent by avoiding any pitfalls on the journey.

Vinod N. Bhat, Mumbai has more than fifteen years of experience in the financial service Industry and is currently working as a Senior Vice President and a Portfolio Manager at Aditya Birla Sun Life AMC Ltd in Mumbai. He has an M.BA in finance from Wharton School, USA, an MS in Industrial Engineering from Pennsylvania State University USA, BTech Mechanical Engineering from IIT Mumbai. He has been writing, speaking and making videos on investments, current state of market, mutual funds and also conducted more than 400 sessions on investment.

## ಹವ್ಯಕ ಶ್ರೀ ಪ್ರಶಸ್ತಿ ಪ್ರದಾನ


ಡಾ. ಕಿಶನ್ ಭಾಗವತ್


ಜಿ. ಎಸ್. ಹೆಗಡೆ ಸಪ್ತಕ


ಶ್ರೀ ನಾರಾಯಣ ಶಾನಭಾಗ

ಶ್ರೀ ಅಖಿಲ ಹವ್ಯಕ ಮಹಾಸಭಾ ಬೆಂಗಳೂರು, ತನ್ನ ಸಂಸ್ಥಾಪನೋತ್ಸವ ದಿನ ಸಂಭ್ರಮಾಚರಣೆ ಸಮಾರಂಭದಲ್ಲಿ ಶಾಸ್ತ್ರೀಯ ಸಂಗೀತದ ಸಾಧನೆ, ಬೆಳವಣಿಗೆ, ಪ್ರಚಾರ, ಪ್ರಸಾರ ಇವುಗಳಲ್ಲಿ ತೊಡಗಿಸಿಕೊಂಡ ಜಿ. ಎಸ್. ಹೆಗಡೆ ಸಪ್ತಕ, ವೈದ್ಯಕೀಯ ಕ್ಷೇತ್ರದಲ್ಲಷ್ಟೇ ಅಲ್ಲದೆ, ಸಾಮಾಜಿಕ ಸೇವೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡ ಡಾ. ಕಿಶನ್ ಭಾಗವತ್. ಇವರಿಗೆ ಹವ್ಯಕ ಶ್ರೀ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಲಾಯಿತು ಹಾಗೂ ಹವ್ಯಕರ ಇತಿಹಾಸ ಮತ್ತು ಸಾಧನೆಗಳನ್ನು ದಾಖಲಿಸಿದ ಹವ್ಯಕ ಅಧ್ಯಯನ ಕೇಂದ್ರದ ವಿಶ್ರಾಂತಿ ನಿರ್ದೇಶಕರರಾದ ಶ್ರೀ ನಾರಾಯಣ ಶಾನಭಾಗರಿಗೆ ಹವ್ಯಕ ಸೇವಾಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

## ರಾಮನವಮಿ ಆಚರಣೆ

ಡೊಂಬಿವಲಿ ವಲಯದವರು ಹಲವು ವರ್ಷಗಳಿಂದ ಆಚರಿಸಿಕೊಂಡು ಬಂದಿರುವ 'ರಾಮನವಮಿ'ಯ ಕಾರ್ಯಕ್ರಮವನ್ನು ಈ ವರ್ಷ 30.03.2023 (ರಾಮನವಮಿ) ರಂದು ಶ್ರೀಮತಿ ಸುನೀತಾ ಹಾಗೂ ಶ್ರೀ ರಾಮಕೃಷ್ಣ ಭಾತ್ರ (ಡೊಂಬಿವಲಿ ಪಶ್ಚಿಮ) ಇವರ ಮನೆಯಲ್ಲಿ ಆಚರಿಸಲಾಯಿತು.

ಇದರಲ್ಲಿ ಅನೇಕ ಹವ್ಯಕ ಹಾಗೂ ಹವ್ಯಕೇತರ ಭಕ್ತರು ಪಾಲ್ಗೊಂಡು ಸೂರ್ಯೋದಯದಿಂದ ಸೂರ್ಯಾಸ್ತದ ತನಕ ಅಖಂಡ ಶ್ರೀ ರಾಮನಾಮ

**RNI NO. MAHBIL / 2000 / 746,**
**Postal Registration No. MCN/161/2021-2023**
**WPP License No. MR / Tech / WPP-130 / North / 2021-2023**
**'Licence to post without prepayment'**

| | | |
|---|---|---|
| ***Posted at Mumbai Patrika Channel Stg. Office Mumbai - 400 001***<br>**Date of Publication : 1st of every month** | **REGISTERED NEWSPAPER** | **Date of Posting :**<br>**2nd, 3rd of every month** |
| ***If undelivered, please return to :***<br>**HAVYAKA WELFARE TRUST**<br>B-207, Valmiki Apts., Near Pharmacy College,<br>Sundar Nagar, Kalina, Vidyanagari P. O.,<br>Mumbai - 400 098. ✆ 2665 2591<br>**E-mail : havyakamumbai@hotmail.com**<br>**Visit : www.havyakamumbai.com**<br><br>Published by Narayan Akadas R.<br>for Havyaka Welfare Trust, Mumbai - 400 098.<br>being printed at M/s. Navin Printers, Mumbai - 400 016.<br>Hon. Editor : **Smt. Amita S. Bhagwat** | **To,** | |



ಜಪವನ್ನು ನಡೆಸಿಕೊಟ್ಟರು. ಜಪಸಂಖ್ಯೆ ಒಂದೂವರೆ ಲಕ್ಷಕ್ಕೂ ಮೀರಿ ಹೋಗಿತ್ತು. ಮಧ್ಯಾಹ್ನದ ಸಮಯದಲ್ಲಿ 25 ಸುಹಾಸಿನಿಯರಿಂದ ಸೀತಾಮಾತೆಗೆ ಕುಂಕುಮಾರ್ಚನೆ ಸೇವೆ ನಡೆಯಿತು

ಸೂರ್ಯಾಸ್ತದ ನಂತರ ಭಜನೆ ಹಾಗೂ ಮಹಾಮಂಗಳಾರತಿ ಮಾಡಿ ಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು. ಪಾಲ್ಗೊಂಡ ಭಕ್ತಾದಿಗಳಿಗೆ ತಿಂಡಿ ಹಾಗೂ ಊಟೋಪಚಾರದ ವ್ಯವಸ್ಥೆ ಮಾಡಲಾಗಿತ್ತು.

